# ಸೂಚನೆ

2002ರ ಮೆಟ್ರೋ ರೈಲ್ವೆ (ಕಾರ್ಯಾಚರಣೆ ಮತ್ತು ನಿರ್ವಹಣೆ) ಅಧಿನಿಯಮ, (2002ರ 60ನೇ ಅಧಿನಿಯಮ)ದ 100ನೇ ಪ್ರಕರಣದ ಅಡಿಯಲ್ಲಿ ತನಗೆ ಪ್ರದತ್ತವಾದ ಅಧಿಕಾರದ ಮೇರೆಗೆ, ಕೇಂದ್ರ ಸರ್ಕಾರವು, ಬೆಂಗಳೂರು ಮೆಟ್ರೋ ರೈಲ್ವೆಯ ಕಾರ್ಯಾಚರಣೆ ಮತ್ತು ನಿರ್ವಹಣೆಗಳನ್ನು ನಿಯಂತ್ರಿಸುವ ಈ ಕೆಳಕಂಡ ನಿಯಮಾವಳಿಗಳನ್ನು ಭಾರತದ ವಿಶೇಷ ರಾಜ್ಯಪತ್ರದಲ್ಲಿ (The Gazette of India – Extraordinary) ದಿನಾಂಕ 30ನೇ ಮಾರ್ಚ್, 2011 ಹಾಗೂ ದಿನಾಂಕ 25ನೇ ಮೇ, 2011 ರಂದು ಪ್ರಕಟಿಸಿದ್ದು, ಇವುಗಳು ಹೀಗೆ ಪ್ರಕಟವಾದ ದಿನಾಂಕದಿಂದ ಜಾರಿಗೆ ಬಂದಿವೆ;

| ಕ್ರ.ಸಂ. | ನಿಯಮಾವಳಿಗಳ ಹೆಸರು | ಭಾರತದ ವಿಶೇಷ ರಾಜ್ಯಪತ್ರದಲ್ಲಿ ಪ್ರಕಟವಾದ ಮತ್ತು ಜಾರಿಗೆ ಬಂದ ದಿನಾಂಕ |
|---|---|---|
| 1 | ಬೆಂಗಳೂರು ಮೆಟ್ರೋ ರೈಲ್ವೆ (ಸಾಮಾನ್ಯ) ನಿಯಮಾವಳಿಗಳು, 2011 | 30.03.2011 |
| 2 | ಬೆಂಗಳೂರು ಮೆಟ್ರೋ ರೈಲ್ವೆ (ಪ್ರಯಾಣಿಕರಿಗೆ ಸಾರ್ವಜನಿಕ ಸಾರಿಗೆಯನ್ನು ಪ್ರಾರಂಭಿಸುವ) ನಿಯಮಾವಳಿಗಳು, 2011 | 30.03.2011 |
| 3 | ಬೆಂಗಳೂರು ಮೆಟ್ರೋ ರೈಲ್ವೆ (ಕ್ಲೇಮು ಆಯುಕ್ತರ ದುರ್ವರ್ತನೆ ಅಥವಾ ಅಸಮರ್ಥತೆ ಬಗೆಗಿನ ತನಿಖೆಗಳ ಪ್ರಕ್ರಿಯೆ) ನಿಯಮಾವಳಿಗಳು, 2011 | 25.05.2011 |
| 4 | ಬೆಂಗಳೂರು ಮೆಟ್ರೋ ರೈಲ್ವೆ (ಸಾಗಣೆ ಮತ್ತು ಟಿಕೆಟ್) ನಿಯಮಾವಳಿಗಳು, 2011 | 25.05.2011 |
| 5 | ಬೆಂಗಳೂರು ಮೆಟ್ರೋ ರೈಲ್ವೆ (ಅಪಘಾತಗಳ ನೋಟೀಸು ಮತ್ತು ವಿಚಾರಣೆ) ನಿಯಮಾವಳಿಗಳು, 2011 | 25.05.2011 |
| 6 | ಬೆಂಗಳೂರು ಮೆಟ್ರೋ ರೈಲ್ವೆ (ಕ್ಲೇಮುಗಳಿಗಾಗಿ ಕಾರ್ಯವಿಧಾನ) ನಿಯಮಾವಳಿಗಳು, 2011 | 25.05.2011 |

ಸದರಿ ನಿಯಮಾವಳಿಗಳು ಇಂಗ್ಲೀಷ್ ಭಾಷೆಯಲ್ಲಿವೆ.

ಸದರಿ ನಿಯಾಮಾವಳಿಗಳನ್ನು ಕನ್ನಡಕ್ಕೆ ಭಾಷಾಂತರಿಸಲಾಗಿದ್ದು ಈ ಮೂಲಕ ಪ್ರಕಟಿಸಲಾಗಿದೆ. ಹೀಗೆ ಪ್ರಕಟಿಸಿದ ಈ ನಿಯಮಾವಳಿಗಳು ಇಂಗ್ಲೀಷ್ ಭಾಷೆಯಲ್ಲಿ ಪ್ರಕಟಿಸಲಾದ ನಿಯಮಾವಳಿಗಳ ಕನ್ನಡದ ಭಾಷಾಂತರವೆಂದು ದೃಢೀಕರಿಸಲಾಗಿದೆ.

ಇಂಗ್ಲೀಷ್‌ನಲ್ಲಿರುವ ನಿಯಮಾವಳಿಗಳಿಗೂ ಮತ್ತು ಕನ್ನಡದಲ್ಲಿರುವ ನಿಯಮಾವಳಿಗಳಿಗೂ ವ್ಯತ್ಯಾಸ ಕಂಡುಬಂದಲ್ಲಿ ಅಥವಾ ಅರ್ಥೈಸುವಲ್ಲಿ ಜಿಜ್ಞಾಸೆ ಉಂಟಾದಲ್ಲಿ, ಇಂಗ್ಲೀಷಿನಲ್ಲಿರುವ ನಿಯಮಾವಳಿಗಳು ಸರಿಯೆಂದು ತಿಳಿಯತಕ್ಕದ್ದು.